ರಾಮರ್ಶನಾನಿ

ಜನಪ್ರಿಯ ಸಾಹಿತ್ಯ, ಪುತ್ತೂರು,ದ.ಕ.

ಆ ಭಾವಗೀತೆ

ಶಂ ಪಾ ದೈತೋಟ

ಮುದ್ರಕರು:
ವಾಣಿ ಅಚ್ಚುಕೂಟ,
ಪುತ್ತೂರು, ದ. ಕ.

ಪ್ರಕಾಶನ:
ಜನಪ್ರಿಯ ಸಾಹಿತ್ಯ,
ಪುತ್ತೂರು, ದ. ಕ.

ಪರಿವಿಡಿ



ಸ್ವ(ರ)ಗತ

ಇಲ್ಲಿರುವವುಗಳಲ್ಲಿ ಕೆಲವು ಅಣಕವಾಡುಗಳಾದರೆ ಇನ್ನು ಹಲವು ಕೆಣಕವಾಡುಗಳು ಹಾಗೂ ತಿಣಕವಾಡುಗಳು. ಹುಲಿಯನ್ನು ನೋಡಿ ಇಲಿ ಮೈಗೆಲ್ಲಾ ಬರೆಯೆಳೆದುಕೊಂಡಂತೆ ಕನ್ನಡದ ಹಿರಿಕಿರಿ ಕವಿಗಳ ಕವನಗಳನ್ನೋದಿ ಸ್ಫೂರ್ತಿಯ ತುರಿಕೆ ತಡೆಯಲಾರವೆ ಇವುಗಳನ್ನು ಗೀಚಿ ನಾನೂ ಕಿರಿಕಿರಿಯ ಕವಿಯಾಗಬಯಸಿದೆ?

ಸದ್ಯ ಕಾಫಿಗೋ ಸಿಗರೇಟಿಗೋ ತೆತ್ತು ಆನಂದ ಆಹ್ಲಾದಗಳನ್ನ ನುಭವಿಸಬಹುದಾದ ಕೆಲ ನಯೇಪೈಸೆಗಳನ್ನಿತ್ತು ಈ ಅಭಾವಗೀತೆ ಯನ್ನು ಕೊಂಡು ಕರೆಕರೆಗೊಳಗಾಗಬೇಡಿ. ತೆರೆದಹಾಗೇ ಮುಚ್ಚಿಟ್ಟು ನಿಮ್ಮ ದಾರೀ ಹಿಡಿದುಬಿಡಿ. ಇನ್ನು ನಿಮಗೆ ಓದಲೇ ಬೇಕೆನಿಸಿದರೆ ಪುಸ್ತಕದಂಗಡಿಮುಂದೆ ಒಗ್ಗಾಲಲ್ಲೇನಿಂತು ಓದಿ ಮುಗಿಸಿ ಬಿಡಿ, ಅಥವಾ ಬೇರೆಯವರ ಭುಜದ ಮೇಲಿಂದ ಬಾಗಿ ಕಣ್ಣಾಡಿಸಿ ತೀರಿಸಿಬಿಡಿ.

ಈ ಹಿಂದೆಯೇ ಇವುಗಳನ್ನು ಪ್ರಕಟಿಸಿದ ಚಿತ್ರಗುಪ್ತ ಗೋಕುಲ, ಪ್ರಭಾತ, ವಿಚಾರವಾಣಿ, ಸತ್ಯಾರ್ಥಿ, ನವಚೇತನ ಮೊದಲಾದ ಪತ್ರಿಕೆಗಳನ್ನಿಲ್ಲಿ ಸ್ಮರಿಸುವುದು (ಹೆಚ್ಚಿನವು ಈಗ-ಸ್ಮರಣೆಯಲ್ಲಿ ಮಾತ್ರ ಇವೆ) ಸೂಕ್ತ. ಹಾಗೇ ಆಗೀಗ ಇವುಗಳಲ್ಲಿ ಕೆಲವನ್ನೋದಿ ಕೆರಳಿದವರಿಗೂ ನನ್ನ ಧನ್ಯವಾದಗಳು. ಇದರಲ್ಲಿ ಉಪಯೋಗಿಸಿಕೊಂಡಿರುವ ರೇಖಾಚಿತ್ರಗಳಿಗಾಗಿ ಹಿರಿಯ ಕಲಾವಿದ ಆರ್ ಎಸ್. ನಾಯ್ಡುರವರಿಗೆ ನಾನು ಕೃತಜ್ಞ.

ಸಧ್ಯ ಈ ಸಂಗ್ರಹವನ್ನು ಪ್ರಕಟಿಸುತ್ತಿರುವ ಜನಪ್ರಿಯ (ಇನ್ನೇನಾದರೂ ಅಪ್ರಿಯವಾಗಲೂ ಬಹುದು) ಸಾಹಿತ್ಯದವರಿಗೂ ಮುದ್ರಿಸಿದ ವಾಣಿ ಅ('ಹು'ಅಲ್ಲ)ಚ್ಚುಕೂಟದವರಿಗೂ ನಾನು ತುಂಂಂಬಾಽಽ ಋಣಿ.

ನೀವು ನಿಜವಾಗಿ ಹಣತೆತ್ತು ಕೊಂಡವರಾದರೆ ಇನ್ನು ಹತ್ತುನಯೇಪೈಸೆ ವೆಚ್ಚ ಮಾಡಲು ಬೇಸರಿಸಲಾರಿರಾದರೆ, ದಯ ಮಾಡಿ ನಿಮ್ಮ ಅಭಿಪ್ರಾಯ ಬರೆದು ತಿಳಿಸಿ.

ಪಾಣಾಜೆ,
೧೫-೮-೧೯೬೩

ಶಂಪಾ



ಮುನ್ನುಡಿ

ನನ್ನ ಭಾವನ ಕವನ
ನನ್ನಣಕ ತನನನ
ನನ್ನದೆಂಬುವು ಜಂಭಕವಿವರ್ಯರೇ
ನಿಮ್ಮ ಕರೆಯಿಲ್ಲದೇ
ನಿಮ್ಮೆಲ್ಲರಣಕಿಸಿದೆ
ನಿಮ್ಮ 'ಶೇವ್' ಗೆ ನೀವೆ 'ಬ್ಲೇಡು' ಬಾಳು
'ಕೊಳಲು' 'ಗರಿ' 'ಗಾನ' ಗಳು
'ನವಿಲು' 'ನಾ ಸಾಯುವುದು'
'ನನ್ನ ದೇಹದ ಬೂದಿ' ನಿಮ್ಮ ತನನ.
ನನ್ನದೆಂಬುವ ಗೀತ
ನಿಮ್ಮ ಗಾಳಿಗೆ 'ಶೀತ'
ಎಲ್ಲೆಲ್ಲವೂ ನಿಮ್ಮ ತಾನ – ಕವನ.
ನನ್ನ ಪೈಲೆಟ್ ಪೆನ್ಗೆ
ನಿಮ್ಮ 'ಹಿನ್ನುಡಿ' ಯಿರಲು
ನನ್ನದೆಂಬುವ ಶಾಯಿ ವಿಕಟ ವರ್ಣ
ಪುಸ್ತಕದಿ ನಡುದಿಸೆಗೆ
ನಿಮ್ಮ ಮುದ್ರಿತ ಕವನ
ಎರಡು ಬದಿಗೂ ನನ್ನ ವರ್ಣ ಶಾಯಿ !

೯–೭–'೫೨

ದಿನಕರ ದೇಸಾಯಿಯುವರ 'ಹಿನ್ನುಡಿ' ಗೆ



ಪಾ ಪಾ ತ್ಮ....

ಇಲ್ಲ, ಇಲ್ಲ,
ಏನೊಂದನೂ
ಮಾಡಲಾರ ಅವನು.
ಬಾಯಿಯಲ್ಲಿ ಬೆರಳಿಟ್ಟರು
ಕಚ್ಚದಂಥ ಹೆಡ್ಡನು.
“ ನೀನು,
“ ನಿನ್ನ ತಂದೆಗಿಂತ
“ ಎಷ್ಟು ವರ್ಷ ಹಿರಿಯನು ? ”
“ ನಾಲ್ಕೊ, ಐದೊ, ಅರಿಯೆನು ! ”
ಆಹ,
ಬೇರೆ ಸಾಕ್ಷಿ ಬೇಕೆ ?
ಸಾಕ್ಷಿ ?
ಇದೆ, ಇದೆ,
ಅವಗು ಮದುವೆಯಾಗಿದೆ.
ಏಕೆ ?,
ಗಂಡು ಅವನು;
ಹೆಣ್ಣು ಅವಳು –

ವರ್ಷಕೊಂದು ಮರಿಯನಿಡುವಳು,
ಪಾ ಽ ಽ ಽ ಽ ಪ,
ಏನೊಂದನೂ ಅರಿಯನು;
ಅವನು
ಏನೊಂದನು ಅರಿಯನು !

ಅಡಿಗರ ಕೃಪೆ

ಇದ್ದರಿರಬೇಕು ಉರಿಯಂತೆ
ಇಲ್ಲದೊಡೆ ಸಾಯುವುದೆ ಲೇಸು
ಸತ್ತರೂ ಹುಟ್ಟುಗುಣ ಬಿಡಬೇಡ
ಬಿಟ್ಟು ನಾರಲು ಬೇಡವೆಂದ ಹುಚ್ಚ

ಮೊಸರಿನ ಹುಡುಗಿ

ಕುವೆಂಪು ಕವನವನೋದಿದೆನು,
ಭಾವಾವೇಷದಿ ಸೊರಗಿದೆನು;
ಕಾಣಲೆಬೇಕವಳೆಲ್ಲಿದ್ದರು ಸರಿ....
ಒಂದೇ ಉಸುರಿಗೆ ' ಹುಡುಕುವೆನು;
ಮೊಸರಿನ ಹುಡುಗಿಯ ಕಾಣುವೆನು '.
ಗೋಣಗಿದೆ;
' ಟೈ ' ಯನು ಕೊರಳಿಗೆ ಸುತ್ತಿ,
ತಾರು ರೋಡಿನಲಿ ತಿರುಗಿದೆನು.
ಕಾಲು ಸೋತಿರಲು,
" ನಡೆ ನಡೆ ಇನ್ನೂ
ತಿಂಗಳ ಬೋನಸು
ಹೆಚ್ಚಿಪೆ ನಿಮಗೆ "
ಎನ್ನುತ ಒಪ್ಪಿಸಿ;
ಮತ್ತೂ ನಡೆಯಲು —
ಕಂಡೆನು ದೂರದಿ:
ಕೊಡವನ್ನೂ;

ಅದರಡಿ
(ಹಳ್ಳಿಗ)ಮಾರನ ಸತಿಯನ್ನು !
ಮುಟ್ಟಿದೆ ಸನಿಯಕೆ;
ಮೂರ್ಛೆಯು ಬಂದಿತು:
ಏತಕೊ ? ನಾನರಿಯೆ.
.... ಮತ್ತೆಲ್ಲರಿಯಿತು,
"'ಮಾರಿ'ಯ ಕಿರುಚಲು
ಮಲಗಿದೆ ನೆಲದಲ್ಲೇ — "
ಎಂದಾ ಪೊಲೀಸನು
ನಡುಗುವ ನನ್ನನು
ತಂದೀ ಕೋಣೆಗೆ ದಬ್ಬಿದನು !
ಸಾಕಪ್ಪಾ ! ! !
ಮೊಸರಿನ ಹುಡುಗಿಯ ಸಹವಾಸ !
ಕವನವೆ ಸಾಕು;
ಕನಸೂ ಬೇಡ
ಕಣ್ಣೆದಿರಂತೂ ಬೇಡಾ ऽ ऽ ऽ !!

೨೭-೧೨-೫೩

ನಾ ಕಂಡ ಮೈಸೂರು

"ಕವಳ ತಾಯಿ ಽ ಕವಳ ತಾಯಿ ಽ ಽ ಽ"
ಮಾನಗೆಟ್ಟ ಮನುಜ ನಾಯಿ
ತನ್ನಿಸೂಜಿನೂಲ
ಹೊಲೀರಿವನ ಬಾಯ;
ಇರುಳು – ಮುಗಿಳು ಒಂದು ಇಲ್ಲ,
ಬೀದಿ ಬೀದಿ ತಿರುಗುತಿರುವ
ಒಂದೆ ಮನೆಯ ಬಿಟ್ಟರುಂಟೆ
ಹಾಕಿ ಗುಂಡು ಇವನಿಗೆ!
ಹಾರಿಸಿವನ ರುಂಡವೆ!
        ಬಲ್ಲನೇನು ನಮ್ಮ ರಾಜ್ಯ!
        ಒಳ್ಳೆ ಆ ಽ ದರ್ಶ ರಾಜ್ಯ!
ಅಲ್ಲು ಇಲ್ಲು ಅಮೃತಶಿಲೆಯು ಕಲ್ಲು ಕಲ್ಲು ಕಲ್ಲು
ಓಣಿ ಓಣಿ ಹೊಳೆಯುತಿರುವ ಬಲ್ಬು ಬಲ್ಬು ಬಲ್ಬು
ಬೆಟ್ಟವೇರಲುಂಟು ಮತ್ತೆ ಹೊನ್ನಿನಂಥ ಮೆಟ್ಟಲು
ಆದರೇನು,
        ಇವನ ಮೈಯ್ಯೊ! ನಾತ, ಮತ್ತು ಬತ್ತಲು
        ಮೈಸೂರಿನ ಐಸಿರಿಯನೆ,

ಅರಿಯದಿಹನು ಈತನು.

ಅಲ್ಲಿ ಅದೊ, ಹೊನ್ನ ತೇರು ಮುತ್ತು ಮೌಕ್ತಿಕಾ!
ಹಿಂದೆ ಮುಂದೆ ಆನೆ ಜೋಡಿ ಛತ್ರ ಚಾಮರಾ!
ರಾಣಿ ಮಂತ್ರಿ ಆಳು ಕಾಳು ಸಾಲು ಸಾಲಲಾ!
ಬಂತು ಬಂತು, ದಾರಿ ಬಿಡಿ;
ಇವನನಾಚೆ ದೂಡಿಬಿಡಿ;
ದೂಡಿಬಿಡಿ, ಮೆಟ್ಟಿಬಿಡಿ, ಸುಟ್ಟುಬಿಡಿ!
'ಹಾಳು ಮುಂಡೆ ಗಂಡರು
ನಾಗರಿಕತೆಯನೆ ಅರಿಯರು'
ನಾಚಿಕೆಯನೂ ಅರಿಯರು.
ಹೊನ್ನ ನಾಡ ಮಾನ ಕಳೆಯಲೆಂದೆನಿಂದ ಇವರನೂ
ಹಾಕಬೇಕು ಗಲ್ಲಿಗೆ!
[ಹಸಿದ ಜನರ ನೆತ್ತರನ್ನು ಹೀರಿ ಕುಣಿವ ಅವರನು
ನೂಕಬೇಕು ಎಲ್ಲಿಗೆ? ?]

೧೫-೧೦-'೫

ಸೋದರರಿಗೆ

ನನಗನಿಸುತಿದೆ ಇಂತು
ತಾಜಮಹಲೊಳು ಕುಳಿತು
ಕಾಫಿ ಸವಿಯುತ್ತ,
ಹರಟೆ ಹೊಡೆಯುವುದು
ನಮಗೊಂದು ಆಗದೆಂದು—
ನಿಮ್ಮ ಕಿವಿ ಹರಿವಂತೆ ಕೂಗುವೆನು.
"ನೋಡಿರೋ
ಬಂದರಿನ ಕೂಲಿಗಳು
ಮಾಡಿರುವ ಮುಷ್ಕರವ
ನಾವಲ್ಲಿ ಗೋಣಿ ಹೊರುವನೊ;
ಕೈ ಮಗ್ಗದಲಿ ಬಟ್ಟೆ ನೈವನೊ;
ಗಾಂಧಿ ನೂತದ್ದು ಗೊತ್ತಿಲ್ಲವೇ ನಿಮಗೆ.
ಹಿಡಿದು ನೇಗಿಲನುತ್ತು ಬಿತ್ತನು ಬಿತ್ತಿ
ಹೆಚ್ಚು ಬೆಳೆ ತೆಗೆದು,
ಶಾರ್ಟೇಜು ನೀಗಿ
ಉಣಲು ಬೆಂದನ್ನ ಉಡಲಿಕಗ್ಗದ ಬಟ್ಟೆ....
ಆದರೆನಗೊ....

ಕೈಕಾಲು ನಡುಕ ಮೈಯಲ್ಲಿ ಬೆವರು
ಅಜ್ಜಿ ಹೇಳಿದ ಹಾಗೆ ತಲೆ ನೋವು ಮೈಕಾವು
ನೀವೇಕೆ ನಡೆಸಬಾರದು ನನ್ನ
— ಹೇಳಿಕೆಯ ಗೆಳೆಯರೆ ? ”

೪-೩-೫೪

ರಾಮಚಂದ್ರ ಶರ್ಮರ ಕೃಪೆ



ಬಸ್ಸು

ಬಸ್ಸು:

ಹೋಗುತ್ತಲೇ
ಹೋಗುತ್ತಲೇ ಇತ್ತು

ಹಾರ್ನು:

ಕಿರುಚುತ್ತಲೇ
ಕಿರುಚುತ್ತಲೇ ಇತ್ತು

ಹುಡುಗಿ:

ತಲೆ ಹೊರಗಿಣಿಕಿ ಬಾಯಿ ತೆರೆದಂತಿತ್ತು
ಇನ್ನೊಂದು ನಿಮಿಷದಲಿ ಹುಳಿ ವಾಂತಿ
ಚಿ .... ಮ್ಮಿ .... ತ್ತು.

ಬಸ್ಸು:

ಹೋಗುತ್ತಲೇ ಹೋಗುತ್ತಲೇ ಇತ್ತು.
ಹೂ ಮುಡಿದ ಜಡೆಯಲ್ಲಿ
ಹೊಗೆ ಬೂದಿಯುರುಳಿತ್ತು

ಸಿಗರೇಟು –

ಉರಿಯುತ್ತಲೇ ಉರಿಯುತ್ತಲೇ ಇತ್ತು.

ಬಸ್ಸು:

ಹೋಗುತ್ತಲೇ ಹೋಗುತ್ತಲೇ ಇತ್ತು.

ಅಲ್ಲಲ್ಲಿ –

ಜನವೊಂದು ಏರುತ್ತಲೇ ಇತ್ತು

ಕೊನೆಗೊಮ್ಮೆ –

ತಿನಿಸಿಲ್ಲಮೂರಿನಲಿ ಪೆಟ್ರೋಲು ಮುಗಿದಿತ್ತು....

ಕೆ. ಎಸ್. ನರಸಿಂಹ ಸ್ವಾಮಿಯವರ ಕೃಪೆ

—೦—

ನಂಜಿ

ನಂಜಿಗೆ ಮುತ್ತು

ಕೆನ್ನೆಯ ಸುತ್ತು

ತುಟಿಯಲಿ ಪನ್ನೀರು.

ಸೆರಗದು ಜಾರೆ

ನಾಚಿಕೆ ಬಾರೆ

ಉದುರಿತು ಕರಿಸೀರೆ.

೯-೭-೫೨

ದಿನಕರ ದೇಸಾಯಿಯವರ ಕೃಪೆ

ಇಂತಿರಲಿ ಇನ್ನು ಬಾಳು

ಕೂಲಿಗಳು ದುಡಿತದಾ ಸಾಗರದಿ ಮುಳುಗಿರಲಿ
ಹುಲ್ಲೆಗಳ ಹಿಂಡು ಹುಲಿಗಾಹಾರವಾಗಿರಲಿ
ಕಳ್ಳು ಕಳ್ಳಾಗಿರದೆ ಕಳ್ಳಸಂತೆಯಲಾಗಿ
ಕಳುವುದನು ಕಲಿಸುತಿರಲಿ

ಒಡಲಕರೆ ಹಿಂದಿರದೆ ಮುಂದೆ ಸಾಗುತ ಬರಲಿ
ಒಡಲೊಡೆಯ ಮುಕ್ತಿಯನು ಬೇಗ ಕೋರುತಯಿರಲಿ
ಕಡು ಬಡವ ಬಲು ಕಿರಿಯ ತಾನೆಂಬ ನಿಜಕಂಡು
ಸರಸಿನಲಿ ಮುಳುಗುತಿರಲಿ

ಮೂಗಿಲಿಯು ಕಣಜದಾ ಕದವ ಕೊರೆಯುತಲಿರಲಿ
ಸೋಗೆ ಹಸರಿಸಿ ಗುಡಿಲು ಹಾರಿ ಹೋಗುತಲಿರಲಿ
ಆಗಸದ ನೀರುದುರಿ ಕೆಳಗಿರುವ ಗುಡಿಲಲ್ಲಿ
ತೊರೆಯು ತಾ ಹರಿಯುತಿರಲಿ

ಹೊಳೆಯು ಹೊನಲಿನ ತೆರದಿ ಕಣ್ಣೀರು ಸುರಿದಿರಲಿ
ಹೊಳೆಗೆ ಬಡವನ ದೂಡುವಾಸೆ ದೃಢವಾಗಿರಲಿ
ಒಡಲಕರೆ ತಾಯ್ನಾಡ ಪ್ರಜೆಯ ತೊಳೆಯುತಲಿರಲಿ
ಇಂತಿರಲಿ ಇನ್ನು ಬಾಳು

೩೦-೯-೫೨

ದಿನಕರ ದೇಸಾಯಿ ಕೃಪೆ

?

ನೀ ಭೋಳೆಯಾಗಿ ಬರೆ
ನಾ ಮೋಸ ಮಾಡಿದರೆ
ನನ್ನ ತಪ್ಪೇನು ?

ಗ್ಯಾಸ್ ಬಸ್

"ಬಂದುದೆಲ್ಲ ಬರಲಿ ಬಿಡು
ಒಂದೆ ಅಡಿಯ ಮುಂದಕಿಡು
ಇಡು, ಇಡು, ಇಟ್ಟುಬಿಡು [ದಮ್ಮಯ್ಯ]
ಎನುತ ಬಂಡಿ ಚಲಿಸುವವನು
ಚಲಿಸುತಿಹನು ಕೀಲಿಯು.
'ಮುಂದಕಯ್ಯೊ....ಗುರ‍್ರಂ ಗುರ‍್ರಂ'
ಚಲಿಸದಿಹುದು ಮೋಟರು

ತಂತಿ ಕಂಬ
ಮರದ ಸಾಲು
ದಾಟಿ ನುಗ್ಗುತಿಹವು ಮುಂದೆ
ಅವಕು ಇವೆಯೆ ಗಾಲಿ ಗೀಲಿ ?
ಇರಲು ಬಹುದು; ಆದರೂನು
ಬಸ್ಸು ಮುಂದೆ ಸಾಗದು.
ಜನರು ಇಳಿದು ದೂಡಿದರೂ, ದೂಡಿದಷ್ಟೆ ಸಾಗಿತು

ಅಲ್ಲಿ ಮೇವ ಎಮ್ಮೆ ಹಿಂಡು
ಕೆಲೆದು ಏರ್ವ ಬಸ್ಸು ಕಂಡು

ತಮ್ಮರಾಯ ಬಂದನೆಂದು ಕಿವಿಗಳೆತ್ತಿ ನಿಂದಿವೆ.
ಮಾರ್ಗದಲ್ಲಿ ಎಮ್ಮೆ ತಮ್ಮ
ಬ್ರೇಕು ಇನಸ್ಪೆಕ್ಟರು
ಬಸ್ಸಿನೊಂದು ಬ್ರೇಕು ತುಂಡು
ಟಯರು ಪಂಕ್ಚರಾಗಿದೆ! —
ಮಂತ್ರಿಯಳಿಯ ಕೆಲಸಹೊಂದಿ
ಧರ್ಮಕೊಂದು ಬಂಗ್ಲೆಹೊಂದಿ
ಶಾಂತನಿದ್ರೆ ಗೈಯ್ಯುವಂತೆ ಮಾರ್ಗದಲ್ಲೆ ಮಲಗಿದೆ.

ದುಡುಂ ದುಡುಂ
ತುಳಿದೊಡಂ
ಹಿಂದೆ ಮುಂದೆ ಎಳೆದೊಡಂ
ಸ್ಥಿತಪ್ರಜ್ಞನಂತಿದೆ!
ಮಣ್ಣನಗಿದು ನುಂಗುವಂತೆ
ಕರುಳೆ ಕರಗಿ ತೀರಿದಂತೆ
ಎಲುಬೆ ಜೀರ್ಣವಾಗುವಂತೆ
ಕಿಡಿ ಕಿಡಿ ಕಿಡಿ ಕಿಡಿಕಾರುತ!
ಸಿಡಿ ಸಿಡಿ ಸಿಡಿ ಸಿಡಿವೇಳುತ!

ಕರುಳುಯಂತ್ರ ಹಸಿವೆ ಮಂತ್ರ
ಘೋಷಿಸುತ್ತ ಕೆರಳಿದೆ
ಅಯ್ಯೋ! ಬೆನ್ನು ಬಿದ್ದ ಜನಕೆ
ಬಸ್ಸು ಕೈಯ್ಯ ಕೊಟ್ಟಿದೆ.

೨೫-೯-೫೨

ಕಣವಿಯವರಿಗೆ

ಅವಸರವಿಲ್ಲ

ಸಮಯವಿಹುದಿನ್ನೂ ಅವಸರವು ಬೇಡ
ಕೃಷ್ಣಭವನದ ಕಾಫಿ ಕರೆಯುತಿಹುದು.
ಶಾಲೆಯಿದೆ ದೂರ ಸುಲಭವಿದೆ ದಾರಿ
ಮಿನಿಟ್ಟೈದು ಮಿಕ್ಕಿರಲು ಭೀತಿಯೇಕೆ ?
ಮಾಸ್ತರುಗಳೆಲ್ಲ ಕುಳಿತಿರಲಿ ಮೆಲ್ಲ
– ನಮ್ಮ ಕ್ಲಾಸಿನ ಮಾಸ್ತರಿಂದು ಬಂದಿಲ್ಲ.
ಹೊತ್ತಾದರೇನು ? ಪಿರಿಡಾದರೇನು ?
ಕಿಟಕಿಯಿಂದೊಳಗಡೆಗೆ ನುಗ್ಗಬಹುದು.

೯-೭-೫೨

ಕುವೆಂಪುರವರ ಕೃಪೆ

ಅವಿಲು

ಯಾವ ಹೋಟೆಲ್ ಮಾಣಿಯಿಂತು
ನಿನ್ನ ಕಡೆದನು ?
ಯಾವ ದೋಸೆಗಾರನಿಂತು
ನಿನ್ನ ಕರಿದನು ?
ಹೋಟೆಲ್ನೊಡೆಯ ‘ ಹೆಲ್ತಿ ’ ನೊಡೆಯ –
ರೊಂದುಗೂಡಿ ಸಂಚು ಮಾಡಿ
ನಿನ್ನ ಕರಿದರೆ ?
ಹಳೆಯ ತಿಂಡಿ ಕರಗಿಸಿಂತು
ನಿನ್ನನರೆದರೆ ?
ಕಿಸೆಯಲಿರುವ ದುಡ್ಡನೆಲ್ಲ
ಸುಲಿಗೆ ಮಾಡುವೆ !
ಹೋಟೆಲ್ನೊಡೆಯನಟ್ಟದಲ್ಲಿ
ನೋಟನೊಟ್ಟುವೆ !
ಕೋರ್ಟು ಸ್ಕೂಲು ಮನೆಗಳಲ್ಲಿ
ಕೇರಿ ಗೋರಿ ಬಿಡದೆ ಜನರ
ಮನವ ಕದ್ದಿಹೆ
ಅವರು ಹೆಜ್ಜೆಯಿಡುವ ದಾರಿ
ನಿನ್ನ ಸೇವೆಗೆ.

೯-೭-೫೩

ಕುವೆಂಪುರವರ ಕೃಪೆ

ನನ್ನ ದೇಹದ ಬೂದಿ

ನನ್ನ ದೇಹದ ಬೂದಿ – ಪೌಡರಲಿ ತುಂಬಿಸಿಡಿ
ನಳಿನಿ ನಿತ್ಯವು ಬಳಿವ ಹೊಸ ಡಬ್ಬಿಯಲ್ಲಿ
ಹೊರಗವಳು ಹೊರಡಲದ ತೆಗೆದು ಹಚ್ಚಲು ಮುಖಕೆ
ಧನ್ಯನಾದೆನು ನಾನು ಸ್ಪರ್ಶದಲ್ಲಿ

ನನ್ನ ದೇಹದ ಬೂದಿ – ಸೆಂಟಿನಲಿ ಕರಗಿಸಿಡಿ
ನಿಮ್ಮಿ ಕರವಸ್ತ್ರಕದ ಪೂಸುತಿರಲಿ
ಮುಷ್ಟಿಯೂ ವಸ್ತ್ರವನು ಮೂಸಿತೋಷವಗೊಳ್ಳೆ
ಧನ್ಯನಾದೆನು ನಾನು ಸಾವಿನಲ್ಲಿ

ನನ್ನ ದೇಹದ ಬೂದಿ – ಮಾರ್ಗದಲಿ ಚೆಲ್ಲಿಬಿಡಿ
ನರ್ಗಿಸಳು ದಿನದಿನವು ನಡೆಯುವಲ್ಲಿ
ಬೂದಿ ಧೂಳನು ಕೂಡಿದವಳ ಪಾದವ ಸೇರೆ
ಧನ್ಯನಾದೆನು ನಾನು ಸಾವಿನಲ್ಲಿ

ಸತ್ತ ಮೇಲಾದರೂ ‘ಸ್ಟಾರೆ’ನ್ನ ಮುದ್ದಿಸಲಿ
ಜೀವದಲಿ ಸೇರಿದರೆ ‘ಶೇವ್’ ಎಂದು
ಎನ್ನ ಸ್ವಾರ್ಥವ ನೆನೆದು ದೂರವಿಹೆ ನಾನಿಂದು
ಸತ್ತಮೇಲೆನ್ನಾಸೆ ಕೈಗೂಡಲಿ.

೧೯೫೩

ದಿನಕರ ದೇಸಾಯಿಯವರ ಕೃಪೆ

ನಾನು ಸಾಯಲು

ನಾನು ಸಾಯಲು ನನ್ನ ಕವನಗಳ ಮರೆಯದಿರಿ
  ಸತ್ತಮೇಲವು ಬೇಕು; ಈಗಲೇಕೆ?
'ಆ ಕವನ' 'ಈ ಕವನ' ಪ್ರತಿಭೆಯಾ ಕವಿಯುವನ
  ಸ್ಮಾರಕವ ಮಾಡೋಣ ಎನ್ನಿ ಜನಕೆ
ಸತ್ತ ಮೇಲಾದರೂ 'ಫಂಡು' ಕೂಡಿಸಿ ನುಂಗಿ
ಸಂತಾಪ ಸಭೆ ಮಾಡಿ 'ಕವಿಗೆ ಶಾಂತಿ' ಎಂದೆನ್ನಿ
  ಮೈಕಿನಲಿ ನಿಮ್ಮ ಹೆಸರನು ಹೇಳಿ
ನಿಮಗಿಹುದು ಹೊಗಳಿಕೆಯು, ನಮಗೆ ಶಾಽಽಂತಿ

೯-೭-೫೨

ದಿನಕರ ದೇಸಾಯಿ ಕೃಪೆ

ಕರೆ

ಬಾಳ ಹಾರಾಟದಲಿ ದುಡಿದು ಹಣ ತುಂಬಿರಲು
'ತ್ರೋಟಿಗ'ನೆ ಬಾ ಇಲ್ಲಿ ಪೇಟೆ ಮನೆಗೆ
ಆಯಾಸವಿಲ್ಲದೆಯೆ ಹಾಯಾಗಿ ತಿರುಗಲಿಕೆ
ಟ್ರಾಮು ಸಿಟಿಬಸ್ಸುಗಳು, ಕಾರುಗಳು ಜಟ್ಕವಿದೆ
ಹೊಟ್ಟೆಯನು ಸಂತವಿಸೆ ಕಾಯಿಸಿದ ಮಾಂಸವಿದೆ
ಅವರ ಮೇಲಕೆ ಸುರಿವ ದ್ರಾಕ್ಷಿಯಾ ಮದ್ಯವಿದೆ

'ಕುವೆಂಪು' ಕೃಪೆ

'ಕಂಟ್ರೋಲಿ'ಗೊಂದು 'ರೂಬು'

'ಯಾರು ಕಾಯುವರಿಲ್ಲಿ ರಾಯರೆ' ಂದೆ
'ಯಾರು ಕೇಳುವ ನೀವು ಸ್ವಾಮಿ' ಯೆಂದೆ.
'ನಾನಾರೊ ಪೇಳುವೆನು ಬೇಕಾದುದೇನು ?'
'ಬೇಕಾದ ಮಾಲಿಲ್ಲು ಸಿಗದೆ ಏನು ?'
'ನೀವ್ಯಾವ ಮನೆಯುವರೊ ? 'ಫೋಂ' ನಂಬ್ರ ಹೇಳಿ'
'ನಾನಿರಲಿ; ಅವರೆಲ್ಲಿ ? ಯಜಮಾನ್ರು ಹೇಳಿ'
'ಅವರಿಲ್ಲೆ ಒಳಗಿಹರು ಕೋಣೆಯಲ್ಲಿ,
ಬರುವರಿದೊ ಹೊರಗಡೆಗೆ ಇಷ್ಟರಲ್ಲಿ'

'ಯಾರಲೇ ಇಲ್ಲೀಗ ಬಂದವರು ಶೀನು ?
ಮಿಡ್ನೈಟು ಕಳೆಯಿತದು ಯಾರು ಬಂದವರು !'
ಮರಿಭಟ್ಟರೇ ಬನ್ನಿ, ಸೌಖ್ಯವೇ ಏನು ?
ಮಿಡ್ನೈಟು ಕಳೆಯುತಿದೆ ಬೇಕಾದುದೇನು ?'
'ನಿಮ್ಮ ಕಾಣಲೆ ಬಂದೆ 'ಉಡುಪಿ' ಯಿಂದ.
'ವೆರಿ ವೆರೀ ಅರ್ಜೆಂಟು ಮಾಲುಂಟೆ' ಯೆಂದ.
'ಮರಿ ಭಟ್ರೆ ನಿಮ್ಮಲ್ಲಿ ಸುಳ್ಳೇನು ಸಲದು'
'ಅತ್ಯವಶ್ಯವು ಎನಗೆ ಕೊಡದೆ ಕಳಿದು'
'ಕಂಟ್ರೋಲ ಮಾಲುಗಳೆ ಬೇಕಾದುದೇನು ?'
'ಅಲ್ಲದಿರೆ ಇಷ್ಟಿರುಳು ಮಾಡುವೆನೆ ನಾನು ?'

‘ ಬೇಕಾದ ಮಾಲೇನು ? ಎಣ್ಣಿ ? ಶುಗರೆ ? ’
‘ ಪ್ರೈವೇಟು ಹೇಳುವೆನು [ಮಣ್ಣು ಮಸಣ.]’
‘ ಹೇಳಿಯಾಯಿತು ನಿಜವು ಮಾಲಿಲ್ಲವಲ್ಲಾ ! ’
‘ ನೀವಿಂತು ಹೇಳಿದರೆ ವೇ (Way) ಇಲ್ಲವಲ್ಲಾ ! ’
‘ ಬೇಕಲ್ಲ ಮಾಲಿಂದು ಮಾಳ್ಪುದೇನೆಂದು ’
‘ ಬೇಡಿದುದ ಕಾಡದೆಯೆ ಕೊಟ್ಟುಬಿಡಿ ಇಂದು ’
‘ ಆಹುದು ಕೊಡುವೆನು ನಾನು ಹೆಚ್ಚು ಬೆಲೆಯಿಹುದೆ ? ’
‘ ಇಹುದು – ಗಿಹುದಿನ ಶಂಕೆ ಮಾಡಲಹುದೆ ? ’
‘ ಸೀಯೈಡಿಯಂಜಿಕೆಯು ಹಿಡಿದಿಹುದು ಕೈಯ್ಯ ’
‘ ಮುಂಜಾವಿನೊಳಗೆನ್ನ ಮನೆಗೆ ಮಾಲಯ್ತ್ರ. ’
‘ ಇಲ್ಲೆನ್ನಲಾರೆ ನಿಮಗಿನ್ನು ಮಾಲ ’
‘ ಬಲ್ಲವರು ನೀವಯ್ಯ, ಹಿಡಿರಿ ಪಾಲ ’
‘ಭಟ್ರೆ ಷುರಿಭಟ್ರೆ ಕೊಳ್ಳಿ; ಸಾಕಾಯಿತೇನು ? ’
‘ ಗಂಡ ಹರಿಯಿತು; ನಿಮ್ಮ್ರ ಹಣವಾಯಿತೇನು ? ’

ಶೀನನಿತ್ತನು ಮಾಲ ಭಟ್ಟರಿಗದಾಯ್ತು
ಹಣವು ಶೆಟ್ಟರಿಗಾಯ್ತು, ಕಾಳ ಪೇಟೆಗಾಯ್ತು

೧೦-೭-೫೨

ಬೇಂದ್ರೆಯವರ ಕೃಪೆ

ಕಮಲೆ, ಜೋಕೆ !

ಬಾಗಿಲ ಮರೆಯೊಳಗಡಗಿಹರು
ಕಮಲೇ, ಒಳಗೇಕೆ ?
ಸೀರೆಯ ಸೆರಗಿಗೆ ಶಾಯೊರಸೆ
ಹೊಂಚುತಲಡಗಿಹರು
ಪುಸ್ತಕವಿರಿಸಲು ನೀ ಬಾಗೆ,
ಕಪ್ಪೆಯನೆಸೆಯುವರು
ಬೆನ್ನಿಗೆ ಕಾಗದವೆಸೆಯುವರು
ತಿರುಗಿರೆ ಗೇಲಿಯ ಮಾಡುವರು
ಡೆಸ್ಕಿನ ಮರೆಯಲ್ಲಡಗಿಹರು
ಕಮಲೇ, ಬಲುಜೋಕೆ ! ೧೬-೭-೩೨

'ಕುವೆಂಪು' ದಯೆ

ಹಾರೈಸು ಹಾರೈಸು ಹಾರೈಸು ಮಾಣಿ
ಹಾರೈಸು ಪ್ರೋಪ್ರೈಟರ್ ನೀನಾಗುವನಕ !

ಕುವೆಂಪು ಕೃಪೆ

ನಾಸ್ತಿಕ ಕಂಡ ದೇವರು

ಎಲ್ಲೆಲ್ಲಿಯು ನೀನಿಹೆಯಂತೆ
ಎಲ್ಲವು ನೀನಂತೆ.
ಕಚ್ಚುವ ಸೊಳ್ಳೆಯು ನೀನಂತೆ
ಚಾಪೆಯು ತಗಣೆಯು ನೀನಂತೆ
ಕಣ್ಣಿಗೆ ಕಾಣದ ಕೈಗೂ ಸಿಲುಕದ
ರೋಗಾಣುಗಳೂ ನೀನಂತೆ
ಮಾರ್ಗದ ಧೂಳಿನ ಕಣವಂತೆ
ಚರಂಡಿಯ ಕೆಸರಿನ ಮಣವಂತೆ

[ಇಷ್ಟು ಬರೆದಾದ ಕವಿಗೆ ಸ್ಫೂರ್ತಿ ಬತ್ತಿದ್ದರೂ ಮೈ ಕೈ ತುರಿಸಿಕೊಳ್ಳುತ್ತದೆ.]

ನೆತ್ತರು ಕೆಟ್ಟ ಮನುಜನ ಮೈಯಲಿ
ತುರಿಸುವ ಕಜ್ಜಾಗಿಹೆಯಂತೆ.

೧೭-೧೦-೫೩

'ಕುವೆಂಪು' ಕೃಪೆ

ಈ ಸುಂದರ ಸಂಜೆ
ಬರಿ ಬಂಜೆ
ನೀನಿಲ್ಲದೆವಿಲ್ಸ್(Willsವಿ)
ನೋ (No) ಪೈಸೇ !

ಉಂಡು ಹೋಗಿ! Please

ನೆಂಟರೇ
ನಿಮ್ಮ ಕಾಲು ಹಿಡಿದು ಬೇಡುವೆ
ಇಂತು ಹೀಗೆ
ಒಂದೆ ಹಾಗೆ ಮನೆಗೆ
ಬಾರದಿರಿ, ಬಾರದಿರಿ;
'ಮರಿ' ಗಳನ್ನು
ತಾರದಿರಿ; ತೂರದಿರಿ.
ಎಲ್ಲಿಂದಲೋ
ಸೋರದಿರಿ, ಸೇರದಿರಿ.
ಬಂದುದಕ್ಕೆ ಉಂಡುಹೋಗಿ
ಮತ್ತೆ ಇತ್ತ ಬಾರದಿರಿ.

'ಬಿಳಿಗಿರಿ'ಯುವರ ದಯೆ

೨೦-೧೦-'೫೨

ನೀನು - ನಾನು - ಅವನು

ನೀನು ವ್ಹೀಲು, ನಾನು ಲಾರಿ
ಅವನು ಡ್ರೈವರು;
ಹೊಡೆದನೆನಲು ಬ್ರಾಂದಿ ಬಾಟ್ಲು
ಕಾರು ವೋರಿ ಹೋರ ಬಂದು
(ಧುಡುಂoooooo)
ಲಾರಿ ತಟಪಟ !

'ಕುವೆಂಪು'ರಿಗೆ

೧೭-೧೦-೫೨

ವೇದಾಂತ

ದೇಹ ಬಳಲಿತು ಮನಸು ಮುಕ್ತಾಯಿತೆಂದೊಬ್ಬ
ಕಿಸೆ ಖಾಲಿಯಾಗುವ ವರೆಗು ಹುಳಿ ಹೆಂಡ ಕ್ಯೊದ
ಖಾಲಿ ಕಿಸೆಯವನೊಂದು ಭಜನೆ ಪದ ಹೇಳುತ್ತ
ಕೈ ತಾಳ ಹೊಡೆದ.

೨೯-೧-'೬೨

ಓಂ ಶಾಂತಿ

ನಿನ್ನೊಂದು ಕೆಂದುಟಿಯು
ಮಿದುಮುತ್ತಿಗೆಂದುನಾ—
ಗಲ್ಲಿಗಲ್ಲಿಯು ಸುತ್ತಿ ಸುಳಿದು ಬಂದೆ!
ಮರೆಮರೆಯ ಸಂದಿಯಲಿ
ಹುಡುಹುಡುಕಿ ಬಹುಬಳಲಿ
ಇದೊ ಬಂದು ಮಲಗಿರುವೆ
ನಿನ್ನ ಮುಂದೆ!
ಎಂದಿನಂತೆಯೆ ನೀನು
ದುಡಿದು ದಣಿದಿಹೆ ಬಲ್ಲೆ,
ಸಾರುತಿದೆ ಕಣ್ಣುಗಳ ನೊಂದಮಾಯೆ
ತೃಪ್ತಿಕಾಣದ ನರದ ಬಯಕೆ
ದಹಿಸಲಿಯೆಂದು
ಹಣವಿತ್ತೆ, ಮೈನೀಡು
ಓ ಹೆಣ್ಣೆ ಶಾಂತಿ!

ಪುಟ್ಟಪ್ಪನವರ 'ಸಿದ್ಧಿ'ಗೆ

೨೮-೧-೫೩

ಈ ಚೆಲುವು

ಈ ಚೆಲುವಿಗೆ ನೀನೊಲಿಯದಿರೆನ್ನ
ಇದು ಬರಿ ಸೀರೆಯ ಮಿರಿಮಿರಿ ಬಣ್ಣ.
ತೊಳೆಯಲು ಮೋರೆಯ ಪೌಡರು; ಸುಕ್ಕು
ತೆರೆದರೆ ರವಕೆಯ ಗುಂಡಿಯು; ಬಿಕ್ಕು
ಫ್ಯಾನ್ಸೀ ಹಲ್ಲಿದು; ಬಾಯಿಯು ಬೊಕ್ಕು
ಪರಿಕಿಸಿ ನೋಡಲು ಚರ್ಮವು ಕಪ್ಪು
ಮುತ್ತೊಂದಿತ್ತರೆ.... (ಉಪ್ಪುಪ್ಪು)
ಅಂದರು ಒಲಿವೆಯ ಓ ಅಣ್ಣ
ಶಾಭಾಸ್ ಹೆಣ್ಣಿನ ಮೈಯನ್ನ

'ಕುವೆಂಪು'ರಿಗೆ

೨೮-೩-'೫೩

ಗುಟ್ಟು

ಎನ್ನನತಿ ಒರಿದು ಮಾಡಲು ದೇವ ನೀನು
ಕನ್ನೆಯರ ಬೀದಿಯನು ಸೃಷ್ಟಿಸಿರುವೆ
ನನ್ನಹಂಕಾರವನು ಹಂಗಿಸಲು ನೀನು
ಎನ್ನಾಕೆಗೂ ಗುಟ್ಟು ತಿಳಿಸಿಬಿಟ್ಟಿರುವೆ

'ಕುವೆಂಪು' ದಯೆ

೧೭-೧೦-,೫೩

ಕೈಗೆ ಕೈ

ಕೈಗೆ ಕೈ ಸೋಂಕಿದರೆ
ಹೊಲಿವುಡ್ಡೆ ನಮ್ಮ ನೆರೆ
ಮೈಗೆ ಮೈ ಸೋಂಕಿದರೆ
ಅವನ ಎದೆಯಲ್ಲಿ ತೆರೆ
ಗುಜುಗುಜಿಪುದುಕ್ಕಿ
ಮೈಗೆ ಮೈ ಸೋಂಕಿದರೆ
ಮೈಗಳೆರಡಪ್ಪಿದರೆ
ಅವಳೊಂದು ರಾತ್ರಿಯಲಿ
ಧನಶೆಟ್ಟಿ ಕೆರೆಯಲ್ಲಿ ಲೀನ ಧುಮ್ಮಿಕ್ಕಿ

ಕುವೆಂಪು ‘ಕೈಗೆಕೈ’ಗೆ

೨೮-೭-೫೩

‘ಲವ್ ಮ್ಯಾರೇಜ್’

ಕತ್ತಿನ ಸುತ್ತ ಬಿಗಿದ ರೇಶ್ಮೆಯ ಶಾಲು
ತುದಿ ಕುಣಿಕೆಗುಕ್ಕಿನ ಜಂತಿ
ನೆಲ ಬಿಟ್ಟ ಕಾಲು

೨೯-೧-೬೨

ವಿಷಕನ್ಯೆ

ಯಮುನೆಯ ನೋರೆಯು
ಕಪ್ಪಿನದಾದರು
ಪೌಡರು ಕಾಂತಿಯನಿತ್ತಿಹುದು
ಬಾಗಿಲ ಮರೆಯಿಂದೀಚೆಗೆ ನಗುಮುಖ
ವಿಷಕನ್ಯೆಯದೋ ಕಾದಿಹಳು !

ದೇಸಾಯಿಯವರ ಕೃಪೆ

೧೬-೮-'೫೩

ಮುಗುದೆ

ಮುಗುದೆಯಿವಳು ನನ್ನವಳು
ಏನೊಂದನೂ ಅರಿಯಳು;
ಒಲೆಯ ಮೇಲೆ ಕಾಫಿಗಿಟ್ಟು
ಉಪ್ಪು ಮೆಣಸು ಸುರಿವಳು !
ಅಕ್ಕಿ ತೊಳೆಯಲಬ್ಬಿಗೊಯ್ದು
ಸೋಪು ತಿಕ್ಕಿ ತೊಳೆವಳು
ಮುಗುದೆಯಿವಳು ನನ್ನವಳು
ಏನೊಂದನೂ ಅರಿಯಳು !

ಅಡಿಗರ ದಯೆ

?

ಹೀಗಿದೆ!

ಮದುವೆಯಾಗಿ ಸಂದುದಿಲ್ಲ
ವರ್ಷವೊಂದು ಹೇಗಿದೆ?
ಕೈಗೆ ಕಾಸು ಕೂಡಲಿಲ್ಲ;
ಬಸುರಿಯೆನ್ನ ಶಾರದೆ!
ಹಿಂದೆ ಮುಂದೆ ನೋಡದೆ,
ಒಂದು ಮಾತು ಹೇಳದೆ!
(— ಅಯ್ಯೊ! ಬಸುರಿಯೆನ್ನ ಶಾರದೆ!)
ಕೋಣೆಯೊಳಗೆ 'ಮರಿ'ಯ ಸದ್ದು,
(ಕರೆದೆ 'ನರ್ಸ'ನೆದ್ದು ಬಿದ್ದು)
ಸುಮ್ಮನಿರಲು ನಾನು ಪೆದ್ದು
ಬಳಗ ಬೇಗ ಬೆಳೆಯುತಿಹುದು
ಕಾಸು ಮಾತ್ರ ಅಯ್ಯೊ ಸೊನ್ನೆ
ಮದುವೆ ಬಯಲಿಗೆಳೆಯಿತು!

ಕೆ. ಎಸ್. ನರಸಿಂಹ ಸ್ವಾಮಿ ಕೃತಿ.

೫-೮-'೫೩

ಅವನು ಆಕೆಗೆ

ಕಾಳಿ ರುದ್ರಿ ಮಾರಿ ಚಂಡಿ
ಎಲ್ಲ ಸೇರಿಯಾದೆ ನೀನು,
ಕಾಳಿಗಿಂತ ಬಣ್ಣ ಕರಿ,
ರುದ್ರಿಯಂತೆ ಕಣ್ಣಿನುರಿ
ಚಂಡಿಗಿಂತ ಮೊಂಡು ಮರಿ
ಕಾಳಿಕರಿ ರುದ್ರಿಯುರಿ
ಮಾರಿ ಚಂಡಿಯರನು ಮೀರಿ
ನೀನೆ ನನಗೆ ಭಯದ ಝರಿ!

'ಕುವೆಂಪು'ರ 'ಪ್ರಿಯನು–ಪ್ರೇಯಸಿ'ಗೆ

೨೭–೧೨–'೫೭

ಮದುವೆ

ಆಗದವರಿಗೆಲ್ಲ ಸವಿಗನಸು
ಆದವರಿಗದುವೆ ಕಹಿ ನೆನಪು
ಆದರೂ ಅನಿವಾರ್ಯದೊಂದು ಗೋಣಸು.

೨೯-೧-'೫೭

ಕೊನೆಯಿಲ್ಲದಾಸರು

ಏಸು 'ಬಿನಾ' ಏಸು 'ನಿಮ್ಮಿ'
ಏಸು 'ನರ್ಗಿಸ್' ಬಂದರೂ-
ತಮ್ಮ ಸೌಂದರ್ಯವನ್ನೆ
ಕೆಮರದೆದುರು ತೆರೆದರೂ-
ಮುಂಬಯ್ಯಲಿ ನಟರ ಸಾಲು
ಕೂಡಿ ಜಗದ ಕಲ್ಯಾಣಕೆ
ಮುಖಮಲ್ಲಿನ ಪರದೆಯಲ್ಲಿ
ಪ್ರಣಯ ತೈಲವೆರೆದರೂ-
ಪುಣ್ಯಪುರುಷ ಗಾಂಧಿಯಂತೆ
ತುಂಡು ಬಟ್ಟೆಯುಟ್ಟರೂ-
ನೀನು ಮಾತ್ರ ಸಾಲದೆಂಬ
ಓ—ರಸಿಕ ಭೂತನೆ!
ಪರದೆ ಖಾಲಿಯಾವರೂನು
ಮತ್ತನಂತೆ ಬಿದ್ದಿಹೆ—
ತುಂಬಿಬಾರದಿಹುದು ನಿನ್ನ
ರಸಿಕತ್ವದಾಸರೆ:
"ಹಾಳಾಗಲಿ ಸೆನ್ಸರೆ!"

೧೮-೯-೫೩

ಕಣವಿಯವರ "ಕೊನೆ"ಗೆ

ಪೌರಾಣಿಕ ಚಿತ್ರ

‘ ದಶ್ಯೋರಶ್ಯ’
“ ಎಂಥ ನೂಕು ನುಗ್ಗಲು ”
ಈ ವರೆಗು ಬಾರದಿರದಂಥ
ಸುಂದರ ತಮಿಳು ಚಿತ್ರ
ಗೌರಿಶಂಕರದ ತುತ್ತತುದಿ ಬಿಳುಪು
ಹಿಮಶಿಲೆಯ ಮೇಲೆ ನೋಡು
–ಪದ್ಮಾಸನದ ಶಿವಧ್ಯಾನಮಗ್ನ
ದಿಟ್ಟಿಸಿನೋಡು !
ಅವನ ಬಳಿ ಕುಳಿತಾಕೆಯರೆನಗ್ನ

೧೬.೮.'೬೨

ಒಲವು

ಒಲವಿಗಿಲ್ಲವು ಬಡವ ಬಲ್ಲಿದ
ರೆಂಬ ಭೇದದ ಭಾವವು
ನುಡಿಯಿದನು ಪರಿಕಿಸಲು ಈಗಿನ
ಸಿನೆಮ ಮಾತ್ರವೆ ಸಾಕ್ಷ್ಯವು.

ಕನ್ನಡ ಪ್ರೇಮ

ಕನ್ನಡದಿ ಹುಟ್ಟಿ ಕನ್ನಡದೆ ಬಳೆದು
ಕನ್ನಡವೆ ಕಲಿತ; ಬಲಿತ;
ಖಂಡ ಕರ್ನಾಟಕವನಖಂಡವಾಡದಿರೆ
‘ ಕನ್ನಡದೆ ಸಾವೆ ’ನೆಂದ !

ಕರ್ನಾಟಕದೆ ನೂತ ಖಾದಿಯನೆ ಧರಿಸಿ
ಶುದ್ಧ ಕನ್ನಡಿಯ ಭಾಷಣಂಗಳ ಮಾಡಿ
ಕನ್ನಡದೆ ಎಮ್ಮೆಲ್ಲೆಯಾದ

ಎಸೆಂಬ್ಲಿಯಲ್ಲನ್ಯ ಭಾಷಾ ದೌರ್ಜನ್ಯ
ಕಂಡು ಬೇಸರಗೊಂಡ;
ಮುಷ್ಟಿಯ ಕಟ್ಟಿ ಮೇಜಿಯ ಮೇಲಿಟ್ಟಿ;
ತಲೆಯನದರ ಮೇಲಿಟ್ಟಿ;
ಸೌಧ ಸೆರೆಯೊಡೆವಂತೆ
ಕನ್ನಡದೆ ಗೊರಕೆಯನು ಹೊಡೆದ.

ನೋಡಿವನ ಭಾಷಾ ಪ್ರೇಮ !

೧೦-೮-'೬೨

ಉಮೇದ್ವಾರ

ಕೈದುಮಣಿಗಳ ಹಿಡಿದು ಕುಣಿವ ಪಾತ್ರಿ
ನೂರು ಭರವಸೆ (ನೂರಾರು ಹರಕೆ;
ಬಾಯ್ತುಂಬ ಮಾತು) ' ಅಭಯ ' ಕೆತ್ತಿದ ಕೈ
ಹೊತ್ತು ಕಂತುವವರೆಗೆ ಕುಣಿತ
' ಬಾರಣೆ 'ಯಾಗಿ ಅಣಿಬಿಚ್ಚಿ
ಆವನಾದ ಪರವ ಚೋಮು
ಹೊತ್ತು ಕಂತಿದ ಮೇಲೆ
ಹೊಯ್‌ದ ಹುಳಿ ಹೆಂಡ
[ಬೈದ ಬಾಯ್ತುಂಬ ಮನಕಂಡವರ]
ಮತ್ತೆ ಕಾಲಬಂದಾಗಲೇನೆ
ದೈವದ ಕೋಲ !

೨೯-೧-'೬೨

ಕವಿ - ಕಾರ್ಮಿಕ - ರಾಜಕಾರಣಿ

ದುಂಬಿ ಕಾಂಬುದು ಹೂವು,
ನಂದಿ ಕಾಂಬುದು ಹಸುರು,
ಹಂದಿ ಕಾಂಬುದವೆರಡರ ಮೂಲ
(ಮುಂಡಿ ತುಂಬಾ ಕೆಸರು)

೧೩-೮-೬೨

ಸರ್ವವ್ಯಾಪಿ

ದೇ. ಭ. ಕಾಂಗ್ರೆಸ್ ತಲೆಮೇಲ್ನೋಡೆ ನೀನಲ್ಲಿ
ಬಿಳಿದಾಗಿ ತೋರುತಿರುವೆ.

ಹಿಂದುಗಳ ರಾಜ್ಯವನು ಕಟ್ಟುವರ ತಲೆಯಲ್ಲಿ
ಕರಿದಾಗಿ ತೋರುತಿರುವೆ.

ಕಮ್ಯುನಿಷ್ಟರ ತೆಗಲೆಯೆಡೆಗೆ ನೋಡಿದೊಡಲ್ಲಿ
ಮುಳ್ಳಾಗಿ ತೋರುತಿರುವೆ.

ಸೋಷಲಿಸ್ಟರ ಮನವನಿಳಿದು ನೋಡಿದೊಡಲ್ಲಿ
ಕಲ್ಲಾಗಿ ತೋರುತಿರುವೆ.

ಭೂತಳದ ಪಕ್ಷಗಳ ಸಿಗಿಸಿಗಿದು ಹೋಳಿವರೆ
ನಾಕಾರನಾಗಿ ನೀ ತೋರಲಿರುವೆ?

ನಾಕಾರ ಪಕ್ಷವನೆ ಅನುಭವಿಸಿ ನೋಡಿದರೆ
ಸಾಕಾರವಾಗಿ ನೀ ತೋರಲಿರುವೆ?

' ಅದು ಒಳ್ಳೆ 'ದಿ' ದು ಒಳ್ಳೆದೆ 'ಂದೆಲ್ಲ ಹಾರೆ
'ಅದು ನಾನು' 'ಇದು ನಾನು' ಎಂದು ನೀಗೊರೆವೆ.

೨೦-೩-೫೩

ಕುವೆಂಪು 'ಅಚಿಂತ್ಯ'ಕ್ಕೆ

ಎಮ್ಮೆಲ್ಲೆ

ಮಾಡಲು ಕೆಲಸವಿದ್ದಾಗೆಲ್ಲ ಮೌನ ಮುನಿ
ಸೌಧದೊಂದು ಮೂಲೆಗೆ ಕುಳಿತು ನಿದ್ರೆಯ ಹೊಡೆದ
ಶಾಸನಸಭಾಪೂರ್ಣಾಸ್ತ್ರದೊಡನೆ
ಸುರುವಾಯ್ತು ಸೊಳ್ಳೆ ಸಂಗೀತ
—ಬೇಡವೆಂದರು ಬಿಡದ ಚುನಾವಣಾ ಪ್ರಚಾರ.
ನೆತ್ತರು ಕುಡಿವ ಅಸುರರ ಕೆನ್ನೆಗೆ ಅವರವರ ಕೈಯ್ಯುಪಚಾರ
ಡಿ. ಡಿ. ಟಿ ಗೂ ಕೂಡ ಇವನೊಂದು ಅಪಚಾರ.

೨೭-೧-೧೯೬೨

'ಓಟು'

ಲಾಭ ವಾ ಎಮ್ಮೆಲ್ಲೆಯೆಂದು
'ಗುವೆಲು' ಕಪ್ಪೆಗಳೆಲ್ಲ ಬಂದು
ಟ್ರೊಂಯ್ ಟ್ರೊಂಯ್ ಲೆಕ್ಚರಂದು
ಓಟನೀಕ್ಷಿಸುತಿರುವವು.
ಡಿಲ್ಲಿ ನಗರವ ಬಿಟ್ಟು ಬಂದು
ಭಾಷೆ ಬಾರದ 'ನಾಡ' ನೆಂದು
ಎಂ. ಪಿ. ಆಸನವೇರಲೆಂದು
ಓಟನೀಕ್ಷಿಸುತಿರುವವು.

ದಿನಕರ ದೇಸಾಯಿ ಕೃಪೆ

೨೯-೧-೧೯೬೨

ಯಾವುದಾದರೇನು ?

ಅದೆ ಆಗಲಿ ಅಥವಾ ಇದೆ ಆಗಲಿ
ಸಲ್ಲದೆನ್ನಬೇಡ
ಪಾರ್ಟಿಯು ಎಲ್ಲ ಒಂದೆ ನೋಡಾ

ಗಾಂಧೀವಾದವೊ ಸಮತಾವಾದವೊ
ಮಜೂರವಾದವೆ ಆಗಿರಲಿ

ಸೆಣಸು ನಿಲಿಸು ನಿನ್ನಧಿಕಾರ ಪತಾಕೆ
ಬೀಳದಂತೆ; ಜೋಕೆ!

ಎಲ್ಲವು ‘ಸರ್ವಂ’ ಸಮಾನ ಸಮಗೇಲಿ
ಝ್ಯು ಝ್ಯುಕಾರವೆ ತಾರಕವು

“ಕಾಂಗ್ರೆಸ್ಸಿಗನೇ ಪ್ರಧಾನ ಮಂತ್ರಿಯು”
“ಒಹೋ! ಅದಕಿದೊ ನಾನೇ ತಂತ್ರಿಯು”

ತಟ್ಟಿದೆವೇ ಈ ಪಕ್ಷವೆ ಕಾಲಲೆ
ನೋಡಲರ್ಧಗಳಿಗೆ
‘ಕಾಂಗ್ರೆಸು’
ಚೆದರಲೇಕೆ ಅದಕೆ ?

೭–೯–೫೭

‘ಅಡಿಗ’ರಿಗೆ

ಆಶ್ವಾಸನೆ

ಮುಂದಿನ ಜನ್ಮದಿ
ಮಂತ್ರಿಯ ಮಗಳಿಗೆ
ನಿನ್ನನು ಗಂಡನ ಮಾಡುವೆನು
....ಎಂಬೊಂದೇ ವರ
ವಿಧಿಯೆನಗಿತ್ತರೆ,
ಸೈ!
ಕೊರಳಿಗೆ ಹಗ್ಗವಿದೊ
ಬಿಗಿಯುವೆನು

೧೧-೪-'೬೦

ನಮ್ಮ ಸರಕಾರ

ಮುಂಜಾವಿನಿಂದ ಸಂಜೆಯ ವರೆಗೆ
ದುಡಿವ ಮುದಿತಂದೆ
ನಾಣ್ಯಹೊಗಲಷ್ಟೆತೂತಿರುವಕಿಜೋರಿ
ತುಂಬಲುಹಕ್ಕುದಾರ;
ಮನಬಂದಂತೆ ಕೀಲಿಕೈ ತಿರುವಿ
ಪೋಲು ಮಾಡಲು ಮಗನೆ ಸರದಾರ.

೨೯-೧-'೬೨

ಬಡವಗೊಂದು ಗುಡಿ

ಬಡವಗೆಂದು ಗುಡಿಯನೊಂದ ಕಟ್ಟುತಿರುವೆಯಾ
ಬಡವರೊಲುಮೆ ಪಡೆದು ಗಣ್ಯನೆನಿಸಲಿರುವೆಯಾ
ಹುಚ್ಚ ನೀನು ಪೇಟೆಗೋಡು
ನಾಗರಿಕ ಪವಾಡ ನೋಡು
ಇರಲು ಮಹಡಿ ಫೋರ್ಡುಕಾರು
ಹೊಟ್ಟೆ ತುಂಬ ಹಲ್ವ ಲಾಡು
ದುಡಿಯುವವಗೆ ಗುಡಿಸಲೊಂದ ಕಟ್ಟಲಿರುವೆಯಾ ?
ಅವರ ವಿಶ್ವ ರೂಪವನ್ನು ಮರೆತು ಬಿಟ್ಟೆಯಾ ?
ಜಗದ ಕೋಟಿ ಬಡವರನ್ನು ತಣಿಸ ಬಲ್ಲೆಯಾ ?
ನಿನಗೆ ಒಂದು ರೂಮು ಸಾಕು
ಅವರಿಗೊಂದು ವಿಶ್ವ ಬೇಕು
ಮಣ್ಣು ಕಲ್ಲು ತಾರು ರೋಡು
ಬಡವಗದುವೆ 'ಬರೆದ' ಬೀಡು
ಅವರಿಗೆಂದು ಗುಡಿಲ ನೀನು ಕಟ್ಟಲಿರುವೆಯಾ ?

ದಿನಕರ ದೇಸಾಯಿ ಕೃಪೆ

೧-೫-'೫೨

ರೈತನ ಸ್ವಾತಂತ್ರ್ಯ

ಆರೇ 'ಔನ್ಸಿನ' ಅನ್ನವನುಣ್ಣೊ!
ಒಂದೇ 'ಬಾಟಲಿ' ನೀರನು ಕುಡಿಯೊ!
'ಇಂಜಿನ' ವಿೂರಿಸಿ ದುಡಿಯೋ ದೂಮು!
ಇಂತಿಷ್ಟೇ 'ಮಿನಿಟೊ'ರಗೋ ನೀನು!
ಸ್ವತಂತ್ರ ಭಾರತ ಮಾತೆಯು ಮಗನು;
ದುಡಿಯುವ ರೈತನು, ಸ್ವತಂತ್ರನು.
ಉಣ್ಣಲು ತಿನ್ನಲು ಕುಡಿಯಲು ನಡೆಯಲು
ನಗಲಿಕ್ಕೊಂದು 'ಪರ್ಮಿಟು.'
ಕೂಗಲು ಕುಣಿಯಲು ಹೆಂಡತಿಯೊಡನೆ
ಮಾತನ್ನಾಡಲು 'ಪರ್ಮಿಟು.'
ಬೆಳೆಯನು ಕೊಡುನೀ! ಓಟನು ಕೊಡುನೀ!
ಇದ್ದದ್ದೆಲ್ಲವ ಕೊಟ್ಟು ಬಿಡು.
ಸ್ವತಂತ್ರ ಭಾರತ ಮಾತೆಯ ಮಗನಿಗೆ
ಏನನು ಮಾಡಲು 'ಪರ್ಮಿಟು.'
ಹೆಚ್ಚಿಗೆ ಬೆಳೆಸ್ನೊ! ಸ್ಟೋರಿಗೆ ಹಾಕೋ!
ಮಡಿಯಲು ನೀನು ಸ್ವತಂತ್ರನು.

'ಮಯೂಖಸಂದೇಶ'ದಿಂದ

ಸಾಹಿತ್ಯ ಸಾರ್ವಭೌಮ

ಇಲ್ಲ ಇಲ್ಲ
ಏನೊಂದನೂ ಬರೆಯಲಿಲ್ಲ ಅವನು
ಮೂಟೆ ಮೂಟೆ ಹೊಗೆಸೊಪ್ಪನು
ಬೆಳೆಸಿಮಾತ್ರ ಕೊಟ್ಟನು
ಶ್ವೇತಪುತ್ರಿ; ಜ್ಞಾನಚೂರ್ಣ; ದಾಂಡುಚುಟ್ಟ ...
ಬೇಸರ ಪರಿಹಾರಿಯು
ಅಯ್ಯೋ! ಇಲ್ಲಿ ಬನ್ನಿರೆಲ್ಲ
ಅವನೆ ಇದಕೆ ಒಡೆಯನು;
ಖಂಡಿ ಖಂಡಿ ಕಾದಂಬರಿಯನು
ಗೀಚಲಿಲ್ಲ ಈತನು.
ಓದುವವರ ಮಿದುಳು ತೂತು ಕೊರೆಯಲಿಲ್ಲ ಈತನು
ಹಣವ ಸುಲಿದರೇನು ತುಂಬ?
ಆರಾಮವನೆ ಇತ್ತರು.

(ಪ್ರೀತಿಯಿಂದ ಚದುರಂಗರಿಗೆ ಸಮರ್ಪಿಸಲಾಗಿದೆ)

೧೯೫೩

?

ಎಲ್ಲಿಯೊ ಓದಿದ ನೆನಪೆನಗಾಯಿತು
'ಕೋಟಿನ ಗುಂಡಿಗೆ ಜಡೆ ಸಿಕ್ಕಿತ್ತು'
ಅಯ್ಯೊ
ಅವನೇ ನಾನಾಗಿದ್ದರೆ
ಏನೊಂದಿತ್ತಾ ಗತ್ತು !

೨೯-೧೦-೫೨

ನಾಕ ನರಕ

ಅವಳೆ ನಾಕ ! ಅವಳೆ ನರಕ !
ನಾಕ:- ಮದುವೆಯ ಮೊದಲಲಿ
ನರಕ:- ಮುಂದೆಂದೆಂದಿಗೂ

'ಕುವೆಂಪು' ಕ್ಷಮೆ

೨೧-೧೨-'೫೨

ನಾವು ತಂದ ಬೀಡಿ

ನಾವು ತಂದ ಬೀಡಿ ಸಾಲ
ಆಚೆ ಹೋಗಬೇಡ;
ಈಚೆಬೀದಿ ಶಾಪಿ (Shop) ನಲ್ಲಿ
ತೆರೆವ ಹೊಸತು ಲೆಜ(Ledger)ರ

ಮಗಳು

ಯಾರಧೋ ಮಗಳ ತಂದಾಗ ಬಲು ವೆಚ್ಚ,
ಆಯಿತವಳಿಂದ ನನಗೊಂದು ಮಗಳು ಆಗಲೂ ವೆಚ್ಚ;
ಕೊಟ್ಟೆ ಮತ್ತಾರಿಗೋ ಆವಳ, ಬೆಳೆಯಿತು ವೆಚ್ಚ
ಅಯ್ಯೋ? ಈ ಮಗಳೆಂಬುದೇ ವೆಚ್ಚದ ಗುಚ್ಛ!

೨೯-೧-'೬೨

ಡಾಕ್ಟರು

ಬೆಟ್ಟದಿಂದಿಳಿದು ಬರುವ ಬಿರಿ ಕೆಟ್ಟ ಲಾರಿ
ಊರಿಗೂರನೆ ಕಬಳಿಸುತಿರುವ ಪ್ಲೇಗು ಮಾರಿ
ಎದುರಿಸಿವನಃ ಬದುಕಿದವರುಂಟು ಬಹಳ ಸಾರಿ
ಈ ಡಾಕ್ಟರ ನಂಬಿ ಉಳಿದವರಿಲ್ಲ ಒಂದೇ ಒಂದು ಬಾರಿ.

೨೯-೧-'೬೨

ಪ್ರೀತಿ

ಎಲ್ಲಿಂದಲೋ ಬಂದ ಒಂದು ವಿದ್ಯುತ್ಕಾಂತಿ
ಬೃಂದಾವನದ ತುಂಬೆಲ್ಲ ನಲಿವ
ರಂಗುರಂಗಿನ ಕಾರಂಜಿ
ನೂರಾರು ಬಣ್ಣದ ಬಲ್ಬು
ಒಂದು ಕಟ್ಟಿಂಗ್ ಪ್ಲ್ಯಾಯರು ಕಡಿತ
ಜಗವೆಲ್ಲ ಕತ್ತಲಿನ ಕುಣಿತ.

೨೯-೧-'೬೨

ನನ್ನ ಮೈ

ನನ್ನ ಮೈಯಲ್ಲಿರುವ ಶರ್ಟಿಗೆ
ಮಲ್ಲಿಗೆಯ ಸಿರಿ ಸೆಂಟಿದೆ
ಆದರೆನ್ನಯ ಮೈಯ್ಯ ಕೆಸರಿಗೆ
ಕಂಪು ನಾತದಿ ಕಂತಿದೆ.

ನಾ ಕಸ್ತೂರಿಯವರ ದಯೆ.

೨೨-೧-'೫೪

ಬಡವನ ಸೊತ್ತು — ಕುತ್ತು

ಕಾಳಿಯ ಮುತ್ತು ಗೋಳಿನಲಿತ್ತು
ಸೂಳೆಯ ಮುತ್ತು ರೋಗದ ಒತ್ತು
ಕೀಟದ ಮುತ್ತು ಹೂವಿಗೆ ಕುತ್ತು
ಪ್ರೆಸ್ಸಿನ ಮುತ್ತು ನನಗೂ ಗೊತ್ತು
ಮಂತ್ರಿಯ ಕಾರಿನ ಚಕ್ರದ ಸುತ್ತು
ಮಾರ್ಗದ ಕೂಲಿಯ ಮಗುವಿಗೆ ಕುತ್ತು
ಬಾನಿನ ಮೇಗಡೆ ಗಿಡುಗನ ಸುತ್ತು
ನೆಲದೆಡೆ 'ಮೇರಿ'ನ ಜೀವಕೆ ಕುತ್ತು
ಮಣ್ಣೊಡೆಯನ ಮಾಳಿಗೆ ಸೊತ್ತು
ಜೀತದ ಜೀವಿಯ ನೆತ್ತರಿನೊತ್ತು
ಸೂಳೆಯ ಸೊತ್ತಿನ ಸೇರಿನ ಲೊಟ್ಟು
ಸಾವಿರ ಸೋದರಿ ಕಣ್ಣೀರಿತ್ತು
ತಿಮ್ಮಿಯ ಜೀವದ ಗಂಡನ ಸುತ್ತು
ಮಿಲ್ಲಿನ ನಲ್ಲಿಯ ಹೊಗೆಯಿತ್ತು
ಕಂಡಲ್ಲೆಲ್ಲಾ ಬಡವಗೆ ಸುತ್ತು
ನಿಂದಲ್ಲೆಲ್ಲಾ ದುಡಿವಗೆ ಕುತ್ತು.

ದಿನಕರ ದೇಸಾಯಿಯವರ ಕೃಪೆ

೧೩-೯-೫೨



ನೀವು ಓದಿದ್ದೀರಾ?

1 **ಮುಂಗಾರು ಮುಗಿಲು**

ದಕ್ಷಿಣ ಕನ್ನಡದ ತರುಣ ಬರಹಗಾರರ ಪ್ರಾತಿನಿಧಿಕ
ಕಥಾ ಸಂಗ್ರಹ:

2 **ರೂಪರಾಶಿಗಳ ಸಂತೆ**

ಡಾ| ಯಂ. ಬಿ. ಮರಕಿಣಿಯುವರ ಸುರಸ ಹರಟೆಗಳು.

3 **ಚಂಡೆ ಮದ್ದಳೆ**

ಕನ್ನಡದ ಹೆಸರಾಂತ ಕವಿ ಶ್ರೀ ಗೋಪಾಲ ಕೃಷ್ಣ ಅಡಿ
ಅವರ ನವ್ಯ ಕವಿತೆಗಳ ಮೊದಲ ಸಂಕಲನ.

4 **ಪ್ರವಾಹದಲ್ಲಿ ಪ್ರತಿಬಿಂಬ**

ಶ್ರೀ ಮುಳಿಯ, ಪುತ್ತೂರು, ಅವರ ಸಣ್ಣ ಕತೆಗಳ ಸಂಗ್ರಹ

5 **ಇನ್ನೊಂದು ಮುಖ**

ತ. ರಾ. ಸು., ಕಟ್ಟೆಮನಿ, ನೀ. ನ್ಯಾ., ಬಲ್ಲಾ
ಐರಣಿ ಶ್ರೀನಿವಾಸ ಮತ್ತು ಮ. ವಿ. ನಾಯಕ ಅವ
ಕತೆಗಳ ಸಂಗ್ರಹ.

6 **ದಕ್ಷಿಣ ಕನ್ನಡದ ಜಾನಪದ ಗೀತೆಗಳು**

ಡಾ| ಯಂ. ಬಿ. ಮರಕಿಣಿಯುವರಿಂದ ಸಂಗ್ರಹಿಸಲ್ಪಟ
ಜಾನಪದ ಗೀತೆಗಳ ಸಂಗ್ರಹ.